Rotary

# JASMINE

ಜಾಸ್ಮಿನ್ जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President

Volume 39 | Issue - 12 | 19th September 2024

ವಿಷಯ : ಮಾನಸಿಕ ಆರೋಗ್ಯ

ಮುಖ್ಯ ಅತಿಥಿ :

ಡಾ| ಪ್ರಕಾಶ್ ತೋಳಾರ್

ಮಾತಾ ಆಸ್ಪತ್ರೆ, ಕುಂದಾಪುರ

Time : 7.00 p.m.
Venue : Hotel Shivaprasad Grand, Kundapura



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

39th year of Service and Fellowship

## ವಾರದ ಸಭೆಯ ವರದಿ




ಕಳೆದ ವಾರದ ಸಭೆಯನ್ನು ತಾ. 12 ರಂದು ಶಿವಪ್ರಸಾದ್ ಹೋಟೆಲಿನ ಸಭಾಂಗಣದಲ್ಲಿ ಕ್ಲಬ್ ಅಸೆಂಬ್ಲಿಯಾಗಿ ನಡೆಸಲಾಯಿತು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮುಂದಿನ ದಿನಗಳಲ್ಲಿ ಕ್ಲಬ್ಬಿನ ವತಿಯಿಂದ ನಡೆಸಲಿರುವ ಪ್ರಮುಖ ವಿಚಾರಗಳ ಬಗ್ಗೆ ತಮ್ಮ ಸಲಹೆಗಳನ್ನು ನೀಡಲು ಕರೆದಿರುವ ಇಂದಿನ ಸಾಪ್ತಾಹಿಕ ಸಭೆಗೆ ಬಂದ ಎಲ್ಲಾ ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರ ಅನುಪಸ್ಥಿತಿಯಲ್ಲಿ ರೊ. ಕೆ. ಕೆ. ಕಾಂಚನ್‌ರವರು ಕಳೆದ ವಾರದ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ವಾರದ ಚಿಂತನೆಯನ್ನು ನೀಡಿದ ರೊ. ಸತ್ಯನಾರಾಯಣ ಪುರಾಣಿಕ್‌ರವರು ಯಾವುದೇ ಕಾರ್ಯಕ್ರಮದಲ್ಲಿ ಸದಸ್ಯರು ನೀಡುವ "ತನು, ಮನ, ಧನ" ದ ಶ್ರೇಷ್ಠತೆಯನ್ನು ವಿವರಿಸಿದರು. ರೋಟರಿ ಮಾಹಿತಿ ನೀಡಿದ ರೊ. ಶ್ರೀಧರ್ ಶೆಟ್ಟಿಯವರು ತಾ. 05–09–24ರಂದು ದೆಹಲಿಯಲ್ಲಿ ನಡೆದ ವರ್ಚುವಲ್ ಮೀಟಿಂಗ್‌ನಲ್ಲಿ ರೋಟರಿ ಫೌಂಡೇಶನ್‌ನ ಝೋನ್ 4, 5, 6, 7ರ ಸದಸ್ಯರಿಗೆ ನೀಡಿದ ಸಂದೇಶದಲ್ಲಿ TRF ಗೆ ಎಲ್ಲಾ ಸದಸ್ಯರು ಕನಿಷ್ಠ 100 ಡಾಲರ್ ದೇಣಿಗೆಯನ್ನು ನೀಡಲು ಮಾಡಿದ ಮನವಿಯ ಮೇರೆಗೆ ತಾನು TRF ಗೆ ಈ ವರ್ಷ 500 ಡಾಲರ್ ನೀಡಲಿದ್ದೇನೆ ಎಂದು ಸಭೆಯಲ್ಲಿ ಘೋಷಿಸಿದರು. ನಂತರ ಕ್ಲಬ್ ಅಸೆಂಬ್ಲಿಯಲ್ಲಿ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಈ ಕೆಳಗಿನ ವಿಚಾರಗಳ ಬಗ್ಗೆ ಸದಸ್ಯರೊಂದಿಗೆ ವಿಮರ್ಶೆಗಳನ್ನು ನಡೆಸಿದರು.

1) ತಾ. 14ರಂದು ತಲ್ಲೂರಿನಲ್ಲಿ ನಡೆಸಲಿರುವ ಬೃಹತ್ ಸಾರ್ವಜನಿಕ ಕ್ಯಾನ್ಸರ್ ತಪಾಸಣಾ ಶಿಬಿರದ ಯಶಸ್ಸಿಗೆ ಎಲ್ಲರ ಸಹಕಾರವನ್ನು ಕೋರಿದರು.
2) ತಾ. 22ರಂದು ಕುಂದೇಶ್ವರ ದೇವಸ್ಥಾನದಲ್ಲಿ, 2024ರ ವಿಶ್ವ ಯೋಗ ಸಮ್ಮೇಳನದ ಕುಂದಾಪುರ ವಲಯದ ಪೂರ್ವಭಾವಿ ಯೋಗ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿದರು.
3) ತಲ್ಲೂರಿನಲ್ಲಿ ಪ್ಲಾಸ್ಟಿಕ್ ತಡಿಕೆಯಲ್ಲಿ ವಾಸಿಸುತ್ತಿರುವ ಬಡ ಅಶಕ್ತ ವಿಧವೆ ಮಹಿಳೆಯಾದ ಶ್ರೀಮತಿ ಮೂಕಾಂಬು ದೇವಾಡಿಗರಿಗೆ ಕ್ಲಬ್ಬಿನ ಹಿತೈಷಿಗಳ ಮೂಲಕ 5 ಲಕ್ಷ ರೂಪಾಯಿ ವೆಚ್ಚದಲ್ಲಿ 2 ಕೋಣೆಗಳಿರುವ ಒಂದು ಸ್ವಂತ ಮನೆಯನ್ನು ಕ್ಲಬ್ಬಿನ ವತಿಯಿಂದ ಕಟ್ಟಿಸಿಕೊಡಲು ಶೀಘ್ರದಲ್ಲಿಯೇ ಶಂಕು ಸ್ಥಾಪನೆಯನ್ನು ಮಾಡಲಿರುವುದಾಗಿ ತಿಳಿಸಿರು.
4) ಉಪ್ಪಿನಕುದ್ರು ಪರಿಶಿಷ್ಟ ಜಾತಿಯ ಶ್ರೀಮತಿ ಲಕ್ಷ್ಮೀಯವರ ಮನೆಗೆ ಬಿದ್ದು ಹೋಗಿರುವ ಮಾಡಿನ (roof) ದುರಸ್ತಿಯನ್ನು ಕ್ಲಬ್ಬಿನ ವತಿಯಿಂದ ನಡೆಸಲು ನಿರ್ಧರಿಸಿರುವುದಾಗಿ ತಿಳಿಸಿದರು.
5) ಮಂಗಳೂರು ವಿಶ್ವವಿದ್ಯಾನಿಲಯದ ಸಹಕಾರದೊಂದಿಗೆ ಕುಂದಾಪುರದಲ್ಲಿ ಪ್ರಥಮವಾಗಿ ತಾಲೂಕು ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ನಡೆಸಿ ಕುಂದಾಪುರದ ಗ್ರಾಮೀಣ ವಲಯದ ಪದವೀಧರ ವಿದ್ಯಾರ್ಥಿಗಳಿಗೆ ವಿಶ್ವಮಾನ್ಯ ಸಂಸ್ಥೆಗಳಲ್ಲಿ ಉದ್ಯೋಗ ಗಳಿಸಲು ಅವಕಾಶಗಳನ್ನು ಕಲ್ಪಿಸಿಕೊಡುವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿರುವುದಾಗಿ ತಿಳಿಸಿದರು.
6) ಕುಂದಾಪುರ ತಾಲೂಕು ಮಟ್ಟದ ಬೃಹತ್ ಕೃಷಿ ಮೇಳವನ್ನು ಬ್ರಹ್ಮಾವರದ ಕೃಷಿಕೇಂದ್ರ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಸಹಕಾರದಿಂದ ಕುಂದಾಪುರದಲ್ಲಿ ನಡೆಸಬಹುದೇ? ಅಥವಾ ಕೃಷಿ ವಿಚಾರ ಸಂಕಿರಣಗಳ ಮೂಲಕ ಕೃಷಿ ಮಾಹಿತಿಯನ್ನು ಕೃಷಿಕರಿಗೆ ನೀಡುವುದು ಸಮಂಜಸವೇ ಎನ್ನುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
7) ಮುಂದಿನ ದಿನಗಳಲ್ಲಿ ರೋಟರಿಯ ಅಂತರ್‌ಜಿಲ್ಲಾ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ನಮ್ಮ ಕ್ಲಬ್ಬಿನ ಸದಸ್ಯರು ಭಾಗವಹಿಸಲು ಪ್ರತೀ ವಿಭಾಗದ ಮುಖ್ಯಸ್ಥರು ತಮ್ಮ ತಂಡಗಳನ್ನು ಸ್ಪರ್ಧೆಗೆ ಅಣಿಗೊಳಿಸಲು ಅಧ್ಯಕ್ಷರು ಸದಸ್ಯರಲ್ಲಿ ವಿನಂತಿಸಿದರು.
8) 2021–22ರ ಸಾಲಿನ ಅಧ್ಯಕ್ಷರಾಗಿದ್ದ ರೊ. ಮಹೇಂದ್ರ ಶೆಟ್ಟಿಯವರ ಶ್ರಮದಿಂದಾಗಿ ಪ್ರಸಕ್ತ ವರ್ಷದಲ್ಲಿ ನಮ್ಮ ಕ್ಲಬ್ಬಿಗೆ ಲಭಿಸಿದ Dist. Grant ರೂ. 1,28,000/–ವನ್ನು ಸದ್ವಿನಿಯೋಗಗೊಳಿಸಲು ರೊ. ಮಹೇಂದ್ರ ಶೆಟ್ಟಿ ಹಾಗೂ ಕ್ಲಬ್ಬಿನ ಹಿರಿಯರೊಂದಿಗೆ ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಾಗಿ ಸಭೆಗೆ ತಿಳಿಸಿದರು.

ಈ ಎಲ್ಲಾ ವಿಚಾರಗಳನ್ನು ದೀರ್ಘವಾಗಿ ಚರ್ಚಿಸಿ, ಸಲಹೆಗಳನ್ನು ನೀಡಿದ ಎಲ್ಲಾ ಸದಸ್ಯರಿಗೆ ತಮ್ಮ ಧನ್ಯವಾದಗಳನ್ನು ತಿಳಿಸಿದರು.

ಕಳೆದ ವರ್ಷ ಉತ್ತಮ ಸಾಧನೆಯನ್ನು ಮಾಡಿ ಜಿಲ್ಲಾ ಮಟ್ಟದಲ್ಲಿ 24 ಪ್ರಶಸ್ತಿಗಳನ್ನು ಪಡೆದು, ಮಧ್ಯಮ ವರ್ಗದಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನಿಯಾಗಿ ಪ್ರಶಸ್ತಿಯನ್ನು ಪಡೆದು, ನಮ್ಮ ಕ್ಲಬ್ಬಿನ ಹಿರಿಮೆಯನ್ನು ಎತ್ತಿ ಹಿಡಿದ ರೊ. ಸುರೇಶ್ ಮಲ್ಯರವರನ್ನು ಕ್ಲಬ್ಬಿನ ವತಿಯಿಂದ ಅಭಿನಂದಿಸಿ, ಶಾಲು ಹೊದೆಸಿ ಸನ್ಮಾನಿಸಲಾಯಿತು. ಪ್ರತಿಯಾಗಿ ರೊ. ಸುರೇಶ್ ಮಲ್ಯರವರು ಈ ಒಂದು ಹಿರಿಮೆಗೆ ಬೆನ್ನೆಲುಬಾಗಿ ದುಡಿದ ರೊ. ರಮಾನಂದ ಕಾರಂತ್, ರೊ. ಸತ್ಯನಾರಾಯಣ ಪುರಾಣಿಕ್ ಮತ್ತು ಎಲ್ಲಾ ಸದಸ್ಯರನ್ನು ವಂದಿಸಿದರು. ರೊ. ಜೆರಾಲ್ಡ್ ಕ್ರಾಸ್ತಾರವರು ನಗೆಹನಿಯನ್ನು ಸಿಡಿಸಿದರು. ಲಕ್ಕಿ ರೋಟೇರಿಯನ್ ಆಗಿ ರೊ. ಅರುಣ್ ಮೆಂಡೋನ್ಸಾರವರು ಆಯ್ಕೆಯಾದರು. ರೊ. ವಾಸುದೇವ ಕಾರಂತರು ಧನ್ಯವಾದಗಳನ್ನು ನೀಡಿದರು. ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಂದೂಡಲಾಯಿತು.









ತಾ. 14–09–2024ರಂದು ತಲ್ಲೂರಿನ ಸೈಂಟ್ ಆಸಿಸಿ ಕಲಾಮಂದಿರದಲ್ಲಿ ಇನ್ನರ್‌ವೀಲ್ ಕ್ಲಬ್ ಕುಂದಾಪುರ ದಕ್ಷಿಣ, ಪ್ರಾಥಮಿಕ ಆರೋಗ್ಯ ಕೇಂದ್ರ ಗಂಗೊಳ್ಳಿ, ಕ್ಯಾಥೋಲಿಕ್ ಸಭಾ ತಲ್ಲೂರು ಘಟಕ ಹಾಗೂ ಹೆಲ್ ಕಮಿಷನ್ ತಲ್ಲೂರು ಚರ್ಚ್ ಇವರ ಆಶ್ರಯದಲ್ಲಿ ಮಂಗಳೂರಿನ ಪ್ರಸಿದ್ಧ ಜುಲೇಖಾ ಯೆನೆಪೋಯ ಇನ್ಸ್ಟಿಟ್ಯೂಟ್ ಆಫ್ ಆಂಕೋಲಜಿ ಆಸ್ಪತ್ರೆಯ ನುರಿತ ಅನುಭವಿ ವೈದ್ಯರಿಂದ ಬೃಹತ್ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು. ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ರೊ. ಡಾ. ಉಮೇಶ್ ಪುತ್ರನ್‌ರವರು ದೇಶದಲ್ಲಿ ಪ್ರತೀ ವರ್ಷ 10 ಲಕ್ಷದಷ್ಟು ಜನರು ಕ್ಯಾನ್ಸರ್‌ನಿಂದಾಗಿ ಸಾಯುತ್ತಿದ್ದಾರೆ. ಆದ್ದರಿಂದ ಇಂತಹ ಶಿಬಿರಗಳು ಗ್ರಾಮೀಣ ಮಟ್ಟದಲ್ಲಿ ಅತೀ ಹೆಚ್ಚಿನ ಸಂಖ್ಯೆಗಳಲ್ಲಿ ಜರುಗಬೇಕು ಎಂದು ಹೇಳಿದರು.

ಶಿಬಿರದಲ್ಲಿ ಒಟ್ಟು 142 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ 57 ಗ್ರಾಮೀಣ ವಲಯದ ಮಹಿಳೆಯರಿಗೆ ಮ್ಯಾಮೋಗ್ರಫಿ ಮತ್ತು ಪ್ಯಾಪ್‌ಸ್ಮಿಯರ್ ಪರೀಕ್ಷೆಗಳನ್ನು ಉಚಿತವಾಗಿ ನಡೆಸಲಾಯಿತು. ಈ ಶಿಬಿರವನ್ನು ನಡೆಸಲು Dist. Cancer Awareness Committee ಯ Vice - Chairman ಆಗಿರುವ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ಹಾಗೂ Zone Trainer ರೊ. ಡಾ. ಉಮೇಶ್ ಪುತ್ರನ್‌ರವರು ಸಹಕರಿಸಿದ್ದರು. ಸಭಾ ಕಾರ್ಯಕ್ರಮವನ್ನು ರೊ. ಸುರೇಖಾ ಪುರಾಣಿಕ್‌ರವರು ನಿರೂಪಿಸಿದ್ದರು.



ಶಿಬಿರದ ಯಶಸ್ಸಿಗಾಗಿ ಪಂಚಾಯತ್ ಮಟ್ಟದಲ್ಲಿ ಪ್ರತಿ ಮನೆಗೂ ಸಂಚರಿಸಿ ಎಲ್ಲಾ ಮಹಿಳೆಯರಿಗೂ ಶಿಬಿರದ ಮಾಹಿತಿಯನ್ನು ನೀಡಲು ಸಹಕರಿಸಿದ ಆಶಾ ಕಾರ್ಯಕರ್ತೆಯರ ತಂಡ




ಕ್ಯಾನ್ಸರ್ ತಪಾಸಣಾ ಶಿಬಿರದ ಬಗ್ಗೆ **ರೇಡಿಯೋ ಕುಂದಾಪ್ರ** ದ ಮೂಲಕ ಸಾರ್ವಜನಿಕರಿಗೆ ಪ್ರಚಾರವನ್ನು ನೀಡಲಾಯಿತು.




ಉಡುಪಿ ಜಿಲ್ಲಾಧಿಕಾರಿಗಳ ಮನವಿಯ ಮೇರೆಗೆ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಆಚರಣೆಗಾಗಿ ತಾ. 15–09–2024ರಂದು ರಾಜ್ಯ ಮಟ್ಟದ 2500 ಕಿ. ಮೀ. ಉದ್ದದ ಮಾನವ ಸರಪಳಿಯಲ್ಲಿ ನಮ್ಮ ಅಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸಿದ್ದರು.

## ವಿಕಲಚೇತನ ಕ್ರೀಡಾಪಟುವಿಗೆ ಧನಸಹಾಯ



ಜಾಗತಿಕ ಮಟ್ಟದ ವಿಶೇಷ ಚೇತನರ ಎಡಗೈ ಮತ್ತು ಬಲಗೈ Arm wrestling ನಲ್ಲಿ ಈಗಾಗಲೇ 2 ಚಿನ್ನದ ಪದಕಗಳನ್ನು ಗೆದ್ದಿರುವ ಸಾಸ್ತಾನ ಪಾಂಡೇಶ್ವರದ ಕೂಲಿ ಕುಟುಂಬದ ಯುವಕ ಶ್ರೀ ಸುರೇಶ್ ಪೂಜಾರಿಯವರಿಗೆ ಮುಂದಿನ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಾಗಿ ಗ್ರೀಸ್ ದೇಶಕ್ಕೆ ಹೋಗಲು ಆತನ ವಿನಂತಿಯ ಮೇರೆಗೆ ರೂ. 10,000/– ದ ದೇಣಿಗೆಯನ್ನು ತಾ. 14–09–2024ರಂದು ಕ್ಲಬ್ಬಿನ ವತಿಯಿಂದ **ರೇಡಿಯೋ ಕುಂದಾಪ್ರ** ದ RJ ಜ್ಯೋತಿ ಸಾಲಿಗ್ರಾಮ ರವರ ಮೂಲಕ ನೀಡಲಾಯಿತು.


Rtn. Dr. S. N. Padiyar
1985-86 & 1986-87


Rtn. B. Arun Kumar Shetty


Rtn. Dr. H. Rammohan


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95

## Rotary Information

The growth rate of Rotary was 5.7 % in the 1940s while it is less than 1% now.
The highest number of 968 clubs were chartered in the year 1984-85.
In the year of the Calgary Challenge in 1995-96, 836 new clubs were formed with the growth of 66,876 net members.

**by Rtn. Dr. Umesh Puthran**



ತಾ. 05–09–2024ರಂದು ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ತಲ್ಲೂರು ಸ.ಮಾ.ಹಿ.ಪ್ರಾ.ಶಾಲೆ ಯಿಂದ ನಿವೃತ್ತರಾದ ಶ್ರೀ ಅರುಣ್ ಕುಮಾರ್ ಶೆಟ್ಟಿ ಯವರನ್ನು ರೋಟರಿ ಸಮುದಾಯ ದಳದ ಅಧ್ಯಕ್ಷರು, ಕಾರ್ಯದರ್ಶಿಯವರು ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು. ಈ ಸಭೆಯಲ್ಲಿ ರೋಟರಿ ಸಮುದಾಯ ದಳದ ಸಭಾಪತಿ ರೊ. ಔರ್ಸ್ವಿನ್ ರೆಬೆಲ್ಲೋರವರು ಉಪಸ್ಥಿತರಿದ್ದರು.


Rtn. K. T. Surendranath
1995-96


Rtn. S. Sadananda Chatra
1996-97


Rtn. B. C. Somayaji
1997-98


Rtn. K. Suresh Kamath
1998-99


Rtn. S. Subraya Halambi
1999-2000



Rtn. S. Vijaya Shetty
2000-01


Rtn. K. Seetharama Nackathaya
2001-02


Rtn. U. S. Shenoy
2002-03


Rtn. Dr. Umesh Puthran
2003-04


Rtn. Dr. B. V. Udupa
2004-05


Rtn. A. Shantharam Pai
2005-06


Rtn. K. Shantharam Prabhu
2006-07

## ಕಳೆದ ವಾರದ ಚಿಂತನೆ

### ಯಾವ ಸಹಾಯ ಶ್ರೇಷ್ಠ?

ಸಹಾಯ ಮಾಡುವ ಮಾರ್ಗಗಳು ಸಾಮಾನ್ಯವಾಗಿ ಮೂರು ರೀತಿಯದ್ದಾಗಿರುತ್ತದೆ.

ಮೊದಲನೆಯದು ಭೌತಿಕ ಸಹಾಯ. ತಮ್ಮ ಸಮಯವನ್ನು ನೀಡಿ ಸ್ವತಃ ಸಹಕರಿಸುವುದು.

ಎರಡನೆಯದು ನೈತಿಕ ಬೆಂಬಲ. ಇಲ್ಲಿ ಮನಸ್ಸಿನಿಂದ ಹರಸುವುದೊಂದಿಗೆ ಮಾನಸಿಕ ಸಹಾಯ ಹಸ್ತ ಚಾಚುವುದು.

ಮೂರನೆಯದು ಧನ ಸಹಾಯ. ಹಣ ಯಾ ದ್ರವ್ಯದ ರೂಪದಲ್ಲಿ ಸಹಾಯ ಮಾಡುವುದು.

ಈ ಮೂರರಲ್ಲಿ, ತಮ್ಮ ಸ್ವಂತ ಸಮಯವನ್ನು ಕಳೆದುಕೊಂಡು (ಪುನಃ ಗಳಿಸಲು ಅಸಾಧ್ಯ) ಮಾಡುವ ಭೌತಿಕ ಸಹಾಯವು ಅತೀ ಶ್ರೇಷ್ಠ ಸಹಾಯವಾಗಿರುತ್ತದೆ.

**ನೀಡಿದವರು : ರೊ. ಸತ್ಯನಾರಾಯಣ ಪುರಾಣಿಕ್**

## The 4 Way Test

*of the things we think, say or do*

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS?**
4. Will it be **BENEFICIAL** to all concerned?

Email id – rotaryclub.kundapurasouth@gmail.com


Rtn. T. Raghavendra Hatwar
2007-08



Rtn. K. Shankar
2008-09



Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
**Rtn. Gerald Crasto**
Mob. : 9880219948